ಒಮ್ಮೆ ತೆಗೆದು, ಮತ್ತೆ ಸಿಕ್ಕಿಸಿದ. ಬಳಸದೆ ಅವು ತುಸು ಬಿಗುವಾಗಿದ್ದವು. ಜೇಬಿನಿಂದ ಭೂತಗನ್ನಡಿ ತೆಗೆದು, ಎಡಭಾಗದ ಬಾಗಿಲಿನ ಸನಿಹದ ಗೋಡೆಯ ಚೌಕಟ್ಟಿನ ಮೇಲೆ ತದೇಕ ದೃಷ್ಟಿಯಿಂದ ಪರೀಕ್ಷೆ ನಡೆಸಿದ. ಕರಮಚಂದನ ಶೈಲಿಯೇ ಹಾಗೆ. ಅತೀ ಚಿಕ್ಕ ವಸ್ತುವಿಗೂ ಮಹತ್ವ ನೀಡುತ್ತಾನೆ. ಕಿಟಕಿಯ ದಾರಂದದಲ್ಲಿದ್ದ ಧೂಳು, ಮರದ ಹುಡಿ ಎಲ್ಲವೂ ಆತನ ಕುತೂಹಲ ಕೆರಳಿಸುತ್ತದೆ! ಅನಂತರ ಕಿಟಕಿಯ ಚಿಲಕವನ್ನು ಕೂಲಂಕಷವಾಗಿ ಗಮನಿಸಿದ. ಅದು ಹಳೆಯ ಕೊಕ್ಕೆ ಮಾದರಿಯ ಚಿಲಕ. ಅದನ್ನು ಸಿಲುಕಿಸಲು ಕಿಡಕಿಯ ದಾರಂದದಲ್ಲೊಂದು ಹುಕ್. ಎಲ್ಲವನ್ನೂ ಪರೀಕ್ಷಿಸಿಯಾದ ಮೇಲೆ ತೃಪ್ತಿ ಹೊಂದಿದವನಂತೆ ಕಂಡ.

"ನಾಗರಾಜು, ಈ ಕಿಟಕಿಯ ಮೂಲಕ ಆರಾಮವಾಗಿ ಫೈಲನ್ನು ಈ ಮೇಜಿನ ಮೇಲಿರಿಸಬಹುದು. ನೀವನ್ನುವುದು, ಈ ಬಾಗಿಲನ್ನು ತೆಗೆಯದೇ ಕೆಲವು ಸಮಯವಾಗಿದೆ ಅಂತ. ಓ.ಕೆ., ನೀವು ಎಷ್ಟು ಹೊತ್ತಿಗೆ ಕಚೇರಿಗೆ ಹೋದಿರಿ? ಅನಂತರ ನಿಮ್ಮ ಮನೆಯೊಳಗೆ ಯಾರೂ ಬಂದಿಲ್ಲವೇ?" ಕರಮಚಂದ ಪ್ರಶ್ನೆ ಹಾಕಿದ.

"ನಾನು ಎಂಟು ಗಂಟೆಗೆಲ್ಲಾ ಕಚೇರಿಗೆ ಹೋಗ್ತೀನಿ. ಒಂಬತ್ತರ ಹೊತ್ತಿಗೆ, ಕೆಲಸದಾಕೆ ನೀಲಮ್ಮ ಬಂದು, ಮನೆ ಗುಡಿಸಿ, ಒರೆಸಿ ಹೋಗ್ತಾಳೆ. ಹತ್ತರ ಹೊತ್ತಿಗೆ ನಾನು ಹೆಚ್ಚಾಗಿ ಕಷಾಯ ಕುಡಿಯಲು ಮನೆಗೆ ಬರುವುದುಂಟು. ಇವತ್ತು ಸಹ ಆಕೆ ಬಂದು ಹೋಗಿದ್ದಾಳೆ."

"ನಿಮ್ಮ ಹೆಂಡ್ತಿ, ಮಕ್ಕಳು ಎಲ್ಲಿ?" ನಾನು ಕೇಳಿದೆ.

"ನನ್ನಾಕೆ ಬ್ಯಾಂಕ್ ಉದ್ಯೋಗಿ. ಮಡಿಕೇರಿಯಲ್ಲಿದ್ದಾಳೆ. ಮಗನೂ ಅವಳ ಜೊತೆ ಅಲ್ಲೇ ಇದ್ದಾನೆ."

ಅನಂತರ ಕರಮಚಂದ ಆ ಫೈಲನ್ನು ತೆರೆದು, ಸಮಗ್ರವಾಗಿ ತಪಾಸಣೆ ಮಾಡಿದ. ಅದರಲ್ಲಿ ಕಾಗದಗಳನ್ನು ಫೈಲ್ ಮಾಡಿದ ಮೇಲೆ ಟ್ಯಾಗ್ ಕಟ್ಟಲಾಗಿತ್ತು. ಅದರಲ್ಲಿ ಪರಿಶೀಲನೆ ನಡೆಸುವಂತಹದು ಏನಿತ್ತೆಂದೇ ನನಗೆ ಅರ್ಥವಾಗಲಿಲ್ಲ. ಬಹಳ ಹೊತ್ತು ಆತ ಅದನ್ನು ಗಮನಿಸುತ್ತಿದ್ದ. ಅನಂತರ, ನಮ್ಮ

